

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10–12–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರ ಇಸ್ಲಾಂ ಸ್ವೀಕಾರದ ಸಂಗತಿಗಳನ್ನು ವಿವಿಧ ರೀತಿಗಳಲ್ಲಿ ಹೇಳಲಾಗಿವೆ. ಆದರೆ ಘಟನೆ ಒಂದೇ ಆಗಿದೆ. ಅಸದುಲ್ ಗ್ಹಾಬದಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ. ಯಮನಿನಲ್ಲಿ ಅಜ್‌ದ್ ಗೋತ್ರದ ಒಬ್ಬ ವೃದ್ಧ ವ್ಯಕ್ತಿ ತನ್ನ ಸತ್ಯಜ್ಞಾನದ ಬೆಳಕಿನಲ್ಲಿ, ಹರಮಿನಲ್ಲಿ ಒಬ್ಬ ಪ್ರವಾದಿಯ ಆಗಮನದ ಬಗ್ಗೆ ಮತ್ತು ಅವರ ಸಹಾಯಕರಾದ ವ್ಯಕ್ತಿಯ ಹೊಟ್ಟೆಯ ಮೇಲೆ ಮಚ್ಚೆ, ಎಡೆತೊಡೆಯಲ್ಲಿ ಒಂದು ಗುರುತು, ಹಿರಿವಯಸ್ಸು, ಸಪೂರ ಶರೀರ ಮತ್ತು ಕೆಲವು ಇತರ ಲಕ್ಷಣಗಳು ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರಲ್ಲಿ ಇರುವುದಾಗಿ ಸೂಚಿಸುತ್ತಾ ಅವರಿಗೆ ಹೀಗೆ ಮುನ್ನೆಚ್ಚರಿಕೆ ನೀಡಿದರು: ಸನ್ಮಾರ್ಗದಿಂದ ಮುಖ ತಿರುಗಿಸಬೇಡಿರಿ, ಅನುಕರಣೀಯ ಮತ್ತು ಅತ್ಯುತ್ತಮ ಮಾದರಿಯ ಮಾರ್ಗವನ್ನು ಬಲವಾಗಿ ಹಿಡಿದು ಅಲ್ಲಾಹನ ವತಿಯಿಂದ ನೀಡಲಾದ ಸಂಪತ್ತು ಹಾಗೂ ಹಣದ ಬಗ್ಗೆ ಅಲ್ಲಾಹನ ಭಯವಿರಿಸಿಕೊಳ್ಳಿರಿ.

ಹಝ್ರತ್ ಅಬೂಬಕರ್(ರ) ಮಕ್ಕಾಗೆ ಮರಳಿಹೋಗಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಅವರ ವಾದಕ್ಕಿರುವ ಪುರಾವೆಯನ್ನು ಕೇಳಿದರು. ಆಗ ಯಮನಿನಲ್ಲಿ ಹಝ್ರತ್ ಅಬೂಬಕರ್(ರ) ಭೇಟಿಯಾದ ವೃದ್ಧ ವ್ಯಕ್ತಿಯ ಕುರಿತು ಹಝ್ರತ್ ಪೈಗಂಬರ್(ಸ) ಅವರನ್ನು ನೆನಪಿಸಿಕೊಟ್ಟರು. ಆಗ **ಅಲ್ಲಾಹನಲ್ಲದೇ ಆರಾಧ್ಯನಿಲ್ಲ ಮತ್ತು ನೀವು ಅಲ್ಲಾಹನ ಪ್ರವಾದಿಯಾಗಿರುವಿರಿ** ಎಂಬುದಾಗಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೈಯಲ್ಲಿ ಹಝ್ರತ್ ಅಬೂಬಕರ್(ರ) ಸಾಕ್ಷ್ಯವಹಿಸಿದರು.

ರಿಯಾಝುನ್ನಝರದಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ – ಹಝ್ರತ್ ಉಮ್ಮೇ ಸಲ್ಮಾ ವರದಿ ಮಾಡುತ್ತಾರೆ: ಖುರೈಶಿಯರು ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರೊಡನೆ ಹೀಗೆ ಹೇಳಿದರು: ನಿಮ್ಮ ಗೆಳೆಯ ಹುಚ್ಚನಾಗಿಬಿಟ್ಟಿದ್ದಾನೆ. ಆತ ಜನರನ್ನು ಏಕದೇವ ವಿಶ್ವಾಸದ ಕಡೆಗೆ ಕರೆಯುತ್ತಿದ್ದಾನೆ ಮತ್ತು ತನ್ನನ್ನು ಸ್ವತಃ ಪ್ರವಾದಿಯೆಂದು ಹೇಳುತ್ತಿದ್ದಾನೆ. ಹಝ್ರತ್ ಅಬೂಬಕರ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ಎಂದಾದರೂ ಸುಳ್ಳು ಹೇಳಿದ್ದಾಗಿ ನಾನು ಕಂಡಿಲ್ಲ. ಅನಂತರ ಹಝ್ರತ್ ಅಬೂಬಕರ್(ರ) ತಡಮಾಡದೇ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬೈಅತ್ ಮಾಡಿ ಅವರನ್ನು ಸತ್ಯಪಡಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ತಂದದ್ದು ಸತ್ಯವೆಂದು ಸಮ್ಮತಿಸಿದರು. ಒಂದು ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಇಸ್ಲಾಮಿನ ಕಡೆಗೆ ನಾನು ಯಾರನ್ನೆಲ್ಲ ಕರೆದನೋ ಅವರೆಲ್ಲ ಎಡವಿದರು ಮತ್ತು ತಡಮಾಡುತ್ತಾ ಹೋದರು – ಅಬೂಬಕರ್ ಹೊರತುಪಡಿಸಿ.

ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರ ಇಸ್ಲಾಂ ಸ್ವೀಕಾರದ ಘಟನೆಯನ್ನು ವಿವರಿಸುತ್ತಾ ಒಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಪ್ರವಾದಿತ್ವದ ವಾದವನ್ನು ಘೋಷಿಸಿದಾಗ ಹಝ್ರತ್ ಅಬೂಬಕರ್(ರ) ಎಲ್ಲೋ ಹೊರಗೆ ಹೋಗಿದ್ದರು. ಅವರು ಮರಳಿ ಬಂದಾಗ ಅವರ ದಾಸಿಯರಲ್ಲಿ ಒಬ್ಬಳು ಅವರೊಡನೆ ಹೀಗೆ ಹೇಳಿದಳು: ನಿಮ್ಮ ಸ್ನೇಹಿತ ಹುಚ್ಚನಾಗಿದ್ದಾನೆ. ಅವರ ಬಳಿಗೆ ಆಕಾಶದಿಂದ ದೇವದೂತರು ಅವತೀರ್ಣವಾಗುತ್ತಾರೆ ಎಂದೆಲ್ಲ ವಿಚಿತ್ರವಾಗಿ ಮಾತನಾಡುತ್ತಾರೆ. ಹಝ್ರತ್ ಅಬೂಬಕರ್(ರ) ತಕ್ಷಣವೇ ಅಲ್ಲಿಂದ ಎದ್ದರು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮನೆಗೆ ತಲುಪಿದರು. ಹಝ್ರತ್ ಪೈಗಂಬರ್(ಸ) ಮುನ್ನುಡಿಯೆಂಬಂತೆ ಕೆಲವು ಮಾತುಗಳನ್ನು ಹೇಳಲು ಬಯಸಿದರು. ಆದರೆ ಹಝ್ರತ್ ಅಬೂಬಕರ್(ರ) ಅವರನ್ನು ತಡೆದು ಹೇಳಿದರು: ಆ ವಿವರಣೆಗಳೇನೂ ಬೇಡ, ಈ ಮಾತು ಸರಿಯೇ ಎಂದು ಮಾತ್ರ ಹೇಳಿದರೆ ಸಾಕು. ಹೌದು, ಸರಿಯೇ ಆಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ನಿಮ್ಮನ್ನು ನಂಬುತ್ತೇನೆ. ಯಾ ರಸೂಲಲ್ಲಾಹ್, ನೀವು ನನಗೆ ಪುರಾವೆಗಳನ್ನು ಮುಂದಿರಿಸುವುದರಿಂದ ನಾನು ತಡೆಯಲು ಕಾರಣವೇನೆಂದರೆ, ನನ್ನ ವಿಶ್ವಾಸವು ನಾನು ನಿಮ್ಮನ್ನು ಕಂಡ ಆಧಾರದ ಮೇಲಾಗಿರಲಿ, ಪುರಾವೆಯ ಮೇಲಾಗದಿರಲಿ ಎಂದು ನಾನು ಬಯಸಿದ್ದೆ. ಏಕೆಂದರೆ ನಿಮ್ಮನ್ನು ಸತ್ಯವಂತ ಮತ್ತು ಸನ್ಮಾರ್ಗಿಯೆಂದು ಒಪ್ಪಿದ ಮೇಲೆ ಬೇರೆ ಯಾವುದೇ ಪುರಾವೆಗಳ ಆವಶ್ಯಕತೆಯೇ ಇರುವುದಿಲ್ಲ. ಒಟ್ಟಿನಲ್ಲಿ, ಯಾವ ಸಂಗತಿಯನ್ನು ಮಕ್ಕಾ ನಿವಾಸಿಗಳು ರಹಸ್ಯವಾಗಿ ಇಟ್ಟಿದ್ದರೋ ಅದನ್ನು ಹಝ್ರತ್ ಅಬೂಬಕರ್(ರ) ತನ್ನ ಕೃತ್ಯಗಳಿಂದ ಸ್ಪಷ್ಟವಾಗಿ ಬಯಲು ಮಾಡಿದರು.

ಅನಂತರ ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹು ತಮ್ಮ ಒಳಿತು ಮತ್ತು ದೇವಭಕ್ತಿಯ ಬಗ್ಗೆ ಚೆನ್ನಾಗಿ ತಿಳಿದಿದ್ದ ಯುವಕರನ್ನು ಒಟ್ಟುಗೂಡಿಸಿ ಅವರನ್ನು ಮನವರಿಕೆ ಮಾಡಲು ಶುರುಮಾಡಿದರು. ಹೀಗೆ ಇತರ ಏಳು ಮಂದಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿದರು. ಇವರೆಲ್ಲರೂ 12 ಮತ್ತು 25 ವರ್ಷ ವಯಸ್ಸಿನ ನಡುವೆ ಇರುವ ಯುವಕರಾಗಿದ್ದರು. ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರಿಗೆ ದೊಡ್ಡ ದೊಡ್ಡ ಆಪತ್ತುಗಳು ಬಂದುವು, ಆಸ್ತಿಪಾಸ್ತಿಗಳನ್ನು ಮತ್ತು ಸ್ವದೇಶವನ್ನು ಬಿಡಬೇಕಾಗಿ ಬಂತು, ಬಾಂಧವರನ್ನು ಕೊಲ್ಲಬೇಕಾಗಿ ಬಂತು, ಆದರೆ ಅವರ ಸ್ಥಿರಚಿತ್ತತೆಯಲ್ಲಿ ಎಂದಿಗೂ ನಡುಕ ಉಂಟಾಗಲಿಲ್ಲ. ಸದಾ ಸ್ಥೈರ್ಯವಾಗಿದ್ದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರಿಗೆ ಸಿದ್ದೀಖ್ ಎಂಬ ಬಿರುದುನಾಮ ನೀಡಿದರು. ಗಮನವಿಟ್ಟು ನೋಡುವುದಾದರೆ, ಹಝ್ರತ್ ಅಬೂಬಕರ್(ರ) ತೋರಿಸಿದ ಸತ್ಯಸಂಧತೆಯ ಉದಾಹರಣೆ ಲಭಿಸುವುದು ಕಷ್ಟ. ಸಾಧ್ಯವಾದಷ್ಟು ಕಠಿಣ ಪರಿಶ್ರಮ ಮಾಡುವ, ಸಾಧ್ಯವಾದಷ್ಟು ದುಆಗಳನ್ನು ಮಾಡುವ ಮತ್ತು ಅಬೂಬಕರರ ಸಹಜಗುಣದ ಬಣ್ಣದಲ್ಲಿ ವರ್ಣರಂಜಿತನಾಗುವ ವರೆಗೆ ಯಾವುದೇ ವ್ಯಕ್ತಿಗೆ ಸಿದ್ದೀಖಿ ಗುಣದ ಪರಿಪೂರ್ಣತೆ ಮತ್ತು ಶ್ರೇಷ್ಠತೆ ಲಭಿಸಲು ಸಾಧ್ಯವಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸತ್ಯಪಡಿಸಿದ ಮೊದಲ ವ್ಯಕ್ತಿ ಎಂಬುದನ್ನು ಹಝ್ರತ್ ಅಬೂಬಕರ್(ರ) ತನ್ನ ಕೃತ್ಯಗಳಿಂದ ಸಾಬೀತುಪಡಿಸಿ ತೋರಿಸಿದರು, ಅದನ್ನು ಮರಣದ ತನಕ ನೆರವೇರಿಸಿದರು ಮತ್ತು ಮರಣದ ನಂತರವೂ ಜೊತೆಬಿಡಲಿಲ್ಲ.

**"ವಲಿಮನ್ ಖಾಫ ಮಖಾಮ ರಬ್ಬಿಹೀ ಜನ್ನತಾನ್"** ಎಂಬ ಸೂರಃ ರಹ್ಮಾನಿನ ವಚನವನ್ನು ವ್ಯಾಖ್ಯಾನಿಸುವಾಗ ಹಝ್ರತ್ ಅಬೂಬಕರ್(ರ)ರ ಉದಾಹರಣೆಯನ್ನು ನೀಡುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅತ್ಯಂತ ಹೆಚ್ಚಾಗಿ ಅವರನ್ನು ದುಃಖಿಸಲಾಯಿತು ಮತ್ತು ಅತ್ಯಂತ ಹೆಚ್ಚು ಅವರನ್ನೇ ಪೀಡಿಸಲಾಯಿತು. ಆದ್ದರಿಂದ ಎಲ್ಲರಿಗಿಂತ ಮೊದಲು ಅವರನ್ನೇ ಪ್ರವಾದಿತ್ವದ ಸಿಂಹಾಸನದಲ್ಲಿ ಕುಳ್ಳಿರಿಸಲಾಯಿತು. ಅಲ್ಲಾಹನು ಅವರಿಗೆ ಇಹಲೋಕದಲ್ಲೂ ಅನುಗ್ರಹವನ್ನು ದಯಪಾಲಿಸುತ್ತಾ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಮೊದಲ ಖಲೀಫರಾಗಿ ನಿಶ್ಚಯಿಸಿದನು ಮತ್ತು ಅವರಿಗೆ ಪರಲೋಕದಲ್ಲಿ ಸ್ವರ್ಗ ಇದ್ದದ್ದೇ ಆಗಿದೆ.

ಪುರುಷರಲ್ಲಿ ಯಾರು ಮೊತ್ತಮೊದಲು ಸತ್ಯವಿಶ್ವಾಸ ಕೈಗೊಂಡವರು ಎಂಬುದರ ಕುರಿತು ಚರಿತ್ರೆಗಾರರ ನಡುವೆ ಭಿನ್ನಾಭಿಪ್ರಾಯಗಳಿವೆ. ಅಲ್ಲಾಮ ಅಹ್ಮದ್ ಬಿನ್ ಅಬ್ದುಲ್ಲಾಹ್ ಬರೆಯುತ್ತಾರೆ: ಇಸ್ಲಾಂ ಸ್ವೀಕರಿಸಿ ತನ್ನ ವಿಶ್ವಾಸವನ್ನು ವ್ಯಕ್ತಪಡಿಸಿದ ಮೊದಲ ಪ್ರೌಢ ವಯಸ್ಸಿನ ಅರೇಬಿಯ ವ್ಯಕ್ತಿ ಹಝ್ರತ್ ಅಬೂಬಕರ್ ಬಿನ್ ಅಬೂಖಹಾಫ ಆಗಿದ್ದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಸೌರ್ ಗುಹೆಯಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಸರಣೆಯಲ್ಲಿ ತನ್ನನ್ನು ತಾನೇ ಸಂಪೂರ್ಣವಾಗಿ ಸಮರ್ಪಿಸಿದ ವ್ಯಕ್ತಿ ಅಬೂಬಕರ್(ರ) ಅವರೇ ಆಗಿದ್ದರು. ಜನರಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ನಂಬಿದ ಮೊದಲ ವ್ಯಕ್ತಿ ಸಹ ಅವರಾಗಿದ್ದರು. ಯುರೋಪಿನ ಪ್ರಸಿದ್ಧ ಪೌರಸ್ತ್ಯ ಸ್ಪ್ರಿಂಗರ್ ಬರೆಯುತ್ತಾರೆ: ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಮೋಸಗೊಳಪಟ್ಟವರಾಗಿದ್ದರೂ ಮೋಸಮಾಡುವವರಾಗಿರಲಿಲ್ಲ ಎಂಬುದಕ್ಕೆ ಅವರನ್ನು ಇಸ್ಲಾಮಿನ ಆರಂಭ ಕಾಲದಲ್ಲಿ ಹಝ್ರತ್ ಅಬೂಬಕರ್(ರ) ನಂಬಿದ್ದರು ಎಂಬುವುದೇ ಅತ್ಯಂತ ದೊಡ್ಡ ಪುರಾವೆಯಾಗಿದೆ. ಈ ವಿಷಯದಲ್ಲಿ ಸ್ಪ್ರಿಂಗರಿನೊಂದಿಗೆ ಸರ್ ವಿಲ್ಲಿಯಮ್ ಮ್ಯೂರ್ ಸಹ ಒಮ್ಮತಾಭಿಪ್ರಾಯವನ್ನು ಹೊಂದಿರುವರು.

ಅಸದುಲ್‌ಗಾಬದಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಅಬೂಬಕರ್(ರ)ರ ಸತ್ಕರ್ಮ ಮತ್ತು ದೇವಭಕ್ತಿಯ ಕಾರಣದಿಂದ ಒಂದು ಸಂಘ ಅವರ ಕೈಯಲ್ಲಿ ಇಸ್ಲಾಂ ಸ್ವೀಕಾರ ಮಾಡಿತು. ಎಲ್ಲಿಯ ವರೆಗೆ ಎಂದರೆ, ಅಶ್ರ ಮುಬಶ್ಶಿರರಲ್ಲಿ (ಸ್ವರ್ಗದ ವಾಗ್ದಾನ ಲಭಿಸಿದ ಹತ್ತು ಸಹಾಬಿಯರು) ಐವರು ಸಹಾಬಿಯರಾದ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ), ಹಝ್ರತ್ ಝುಬೇರ್ ಬಿನ್ ಅವಾಮ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರತ್ ಸಅದ್ ಬಿನ್ ಅಬೀವಖಾಸ್(ರ), ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ) ಎಂಬವರು ಹಝ್ರತ್ ಅಬೂಬಕರ್(ರ)ರ ಕೈಯಲ್ಲಿ ಇಸ್ಲಾಂ ಸ್ವೀಕರಿಸಿದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ತನ್ನ ಗ್ರಂಥವಾದ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಬರೆಯುತ್ತಾರೆ: ಇವರೆಲ್ಲರೂ ಆದರಣೀಯ ಮತ್ತು ಉನ್ನತ ಪದವಿಯನ್ನು ಪಡೆದು ಶ್ರೇಷ್ಠ ಸಹಾಬಿಯರಲ್ಲಿ ಗಣಿಸಲ್ಪಟ್ಟರು. ಹಝ್ರತ್ ಪೈಗಂಬರ್(ಸ) ತನ್ನ ಅನುಗ್ರಹೀತ ನಾಲಗೆಯಿಂದ ಸ್ವರ್ಗದ ಸುವಾರ್ತೆಯನ್ನು ನೀಡಿದ ಹತ್ತು ಸಹಾಬಿಯರಲ್ಲಿ ಅವರಿದ್ದರು ಹಾಗೂ ಹಝ್ರತ್ ಪೈಗಂಬರ್(ಸ)ರ ಅತ್ಯಂತ ನಿಕಟ ಸಹಚರರಲ್ಲಿ ಮತ್ತು ಸಲಹೆಗಾರರಲ್ಲಿ ಗಣಿಸಲ್ಪಡುತ್ತಿದ್ದರು.

ಇಸ್ಲಾಂ ಸ್ವೀಕರಿಸಿದವರ ಮೇಲೆ ಮಕ್ಕಾದ ಸತ್ಯನಿಷೇಧಿಗಳು ಅನೇಕ ದೌರ್ಜನ್ಯಗಳನ್ನು ಮಾಡಿದರು. ದುರ್ಬಲ ಮತ್ತು ಗುಲಾಮರಾದ ಮುಸ್ಲಿಮರು ದೌರ್ಜನ್ಯ ಮತ್ತು ಪೀಡನೆಗೆ ಗುರಿಯಾದರು ಎಂದು ಮಾತ್ರವಲ್ಲ, ಸ್ವತಃ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ) ಕೂಡ ಸುರಕ್ಷಿತರಾಗಿರಲಿಲ್ಲ. ಸೀರತ್ ಹಲ್‌ಬಿಯದಲ್ಲಿ ಹೀಗೊಂದು ಘಟನೆ ಪ್ರಸ್ತಾಪಿಸಲಾಗಿದೆ: ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ತಲ್‌ಹ(ರ) ಇಸ್ಲಾಂ ಸ್ವೀಕಾರ ಮಾಡಿದ್ದಾಗಿ ಬಯಲು ಮಾಡಿದಾಗ ಖುರೈಶಿನ ಸಿಂಹವೆಂದು ಪ್ರಸಿದ್ಧನಾಗಿದ್ದ ನೌಫಲ್ ಬಿನ್ ಅದವಿಯ ಎಂಬವನು ಅವರಿಬ್ಬರನ್ನು ಒಂದೇ ಹಗ್ಗದಲ್ಲಿ ಕಟ್ಟಿ ಹಾಕಿದನು. ಆದ್ದರಿಂದಲೇ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ತಲ್‌ಹ(ರ)ರನ್ನು **ಖರೀನೈನ್** ಎಂದು ಕರೆಯಲಾಗುತ್ತದೆ ಎಂದರೆ, ಜೊತೆಗೆ ಸೇರಿದ್ದ ಇಬ್ಬರು ಗೆಳೆಯರು. ಒಮ್ಮೆ ಹಝ್ರತ್ ಪೈಗಂಬರ್(ಸ) ಮಸ್ಜಿದ್ ಹರಾಮಿನ ಹತೀಮಿನಲ್ಲಿ ನಮಾಝ್ ಅನುಷ್ಠಿಸುತ್ತಿದ್ದಾಗ ಉಖ್ಬ ಬಿನ್ ಅಬೀ ಮುಈತ್ ಎಂಬವನು ಒಂದು ಬಟ್ಟೆಯನ್ನು ಹಝ್ರತ್ ಪೈಗಂಬರ್(ಸ)ರ ಕುತ್ತಿಗೆಗೆ ಹಾಕಿ ಅವರ ಗಂಟಲನ್ನು ಜೋರಾಗಿ ಹಿಸುಕಿದನು. ಅಷ್ಟರಲ್ಲಿ ಹಝ್ರತ್ ಅಬೂಬಕರ್(ರ) ಅಲ್ಲಿಗೆ ತಲುಪಿದರು ಹಾಗೂ ಅವರು ಉಖ್ಬನನ್ನು ಜೋರಾಗಿ ತಳ್ಳಿಕೊಂಡು ಹಝ್ರತ್ ಪೈಗಂಬರ್(ಸ)ರಿಂದ ಬಿಡಿಸಿಕೊಂಡರು ಮತ್ತು ಹೀಗೆ ಹೇಳಿದರು: **ಅತಖ್‌ತುಲೂನ ರಜುಲನ್ ಅನ್‌ಯಖೂಲ ರಬ್ಬಿಯಲ್ಲಾಹು.** ಎಂದರೆ, ನನ್ನ ಪರಿಪಾಲಕ ಅಲ್ಲಾಹನೆಂದು ಹೇಳಿದ್ದಕ್ಕೆ ಮಾತ್ರ ಒಬ್ಬ ವ್ಯಕ್ತಿಯನ್ನು ನೀವು ಕೊಲ್ಲುವಿರಾ?

ಒಂದು ವರದಿಯಲ್ಲಿ ಹೀಗಿದೆ: ಒಂದು ಬಾರಿ ಮಸ್ಜಿದ್ ಹರಾಮಿನಲ್ಲಿ ಬಹುದೇವಾರಾಧಕರು ಹಝ್ರತ್ ಪೈಗಂಬರ್(ಸ)ರ ಸುತ್ತ ಒಟ್ಟುಗೂಡಿದರು. ಹಝ್ರತ್ ಅಬೂಬಕರ್(ರ)ರಿಗೆ ಇದರ ಮಾಹಿತಿ ಲಭಿಸಿದಾಗ ಅವರು ಅಲ್ಲಿಗೆ ತಲುಪಿದರು ಮತ್ತು ಅವರು ಹೀಗೆ ಕೇಳಿದರು: **ಅತಖ್‌ತುಲೂನ ರಜುಲನ್ ಅನ್‌ಯಖೂಲ ರಬ್ಬಿಯಲ್ಲಾಹು ವ ಖದ್ ಜಾಅಕುಂ ಬಿಲ್‌ಬಯ್ಯಿನಾತಿ ಮಿರ್ರಬ್ಬಿಕುಂ.** ಎಂದರೆ, ನನ್ನ ಪರಿಪಾಲಕ ಅಲ್ಲಾಹನೆಂದು ಹೇಳಿದ್ದಕ್ಕೆ ಮಾತ್ರ ಒಬ್ಬ ವ್ಯಕ್ತಿಯನ್ನು ನೀವು ಕೊಲ್ಲುವಿರಾ? ಮತ್ತು ಅವರು ನಿಮ್ಮ ಬಳಿಗೆ ನಿಮ್ಮ ಪರಿಪಾಲಕನ ಕಡೆಯಿಂದ ಸ್ಪಷ್ಟವಾದ ದೃಷ್ಟಾಂತಗಳನ್ನು ತೆಗೆದುಕೊಂಡು ಬಂದಿರುವರು. ಆಗ ಮುಶ್ರಿಕರು ಹಝ್ರತ್ ಪೈಗಂಬರ್(ಸ)ರನ್ನು ಬಿಟ್ಟು ಹಝ್ರತ್ ಅಬೂಬಕರ್(ರ)ರನ್ನು ಹೊಡೆಯಲು ಆರಂಭಿಸಿದರು. ಹಝ್ರತ್ ಅಬೂಬಕರ್(ರ)ರ ಪುತ್ರಿ ಹಝ್ರತ್ ಅಸ್ಮಾ(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ)

ನಮ್ಮ ಬಳಿಗೆ ಬರುವಾಗ ಅವರ ಸ್ಥಿತಿ ಏನಾಗಿತ್ತು ಎಂದರೆ, ಅವರು ತನ್ನ ಕೂದಲನ್ನು ಹಿಡಿಯುವಾಗ ಅವು ಕೈಗಳಲ್ಲಿ ಬರುತ್ತಿದ್ದುವು ಮತ್ತು ಅವರು ಹೀಗೆ ಹೇಳುತ್ತಿದ್ದರು: **ತಬಾರಕ್ತ ಯಾಝುಲ್‌ಜಲಾಲಿ ವಲ್‌ಇಕ್ರಾಮ್**. ಎಂದರೆ, ಪ್ರತಾಪಶಾಲಿಯೂ ಗೌರವಾರ್ಹನೂ ಆದವನೇ, ನೀನು ಅನುಗ್ರಹಪೂರ್ಣನಾಗಿರುವೆ.

ಹಝ್ರತ್ ಅಲಿ(ರ) ಹೇಳುತ್ತಾರೆ: ನಾನಾದರೋ ನನ್ನೊಂದಿಗೆ ಹೋರಾಡಿದವರನ್ನು ಹೊಡೆದು ಬೀಳಿಸಿರುವೆನು. ಆದರೆ ಅತ್ಯಂತ ಶೂರ ಅಬೂಬಕರ್(ರ) ಆಗಿರುವರು. ಬದ್ರ್ ಯುದ್ಧದಲ್ಲಿ, ಯಾವನೇ ಮುಶ್ರಿಕನು ಹಝ್ರತ್ ಪೈಗಂಬರ್(ಸ)ರ ಬಳಿಗೆ ತಲುಪುವುದಕ್ಕೆ ಮುಂಚಿತವಾಗಿ ಅವನನ್ನು ಎದುರಿಸಲಿಕ್ಕಾಗಿ ಹಝ್ರತ್ ಅಬೂಬಕರ್(ರ) ತನ್ನ ಖಡ್ಗವನ್ನು ಹಿಡಿಯುತ್ತಾ ಹಝ್ರತ್ ಪೈಗಂಬರ್(ಸ)ರ ಸಮೀಪ ನಿಂತಿದ್ದರು. ಮತ್ತೊಮ್ಮೆ ಹಝ್ರತ್ ಪೈಗಂಬರ್(ಸ)ರನ್ನು ಉಪದ್ರವಿಸುತ್ತಿದ್ದ ಖುರೈಶಿ ಜನರನ್ನು ಹಝ್ರತ್ ಅಬೂಬಕರ್(ರ) ಹೊಡೆದೋಡಿಸಿದರು. ಹಝ್ರತ್ ಅಲಿ(ರ) ಹೇಳುತ್ತಾರೆ: ಅಲ್ಲಾಹನಾಣೆ, ಹಝ್ರತ್ ಅಬೂಬಕರ್(ರ)ರ ಒಂದು ಘಳಿಗೆಯು ಫಿರ್‌ಔನಿನ ಕುಟುಂಬದ ಸತ್ಯವಿಶ್ವಾಸಿಯ ಭೂಮಿಯಷ್ಟು ಒಳಿತುಗಳಿಗಿಂತ ಉತ್ತಮ. ಏಕೆಂದರೆ ಆ ವ್ಯಕ್ತಿ ತನ್ನ ವಿಶ್ವಾಸವನ್ನು ರಹಸ್ಯವಾಗಿಡುತ್ತಿದ್ದನು. ಆದರೆ ಹಝ್ರತ್ ಅಬೂಬಕರ್(ರ) ತನ್ನ ವಿಶ್ವಾಸವನ್ನು ಘೋಷಿಸುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಒಮ್ಮೆ ಕೆಲವು ಶತ್ರುಗಳು ಹಝ್ರತ್ ಪೈಗಂಬರ್(ಸ)ರನ್ನು ಒಬ್ಬಂಟಿಯಾಗಿ ಕಂಡಾಗ ಅವರ ಕುತ್ತಿಗೆಗೆ ರೂಮಾಲನ್ನು ಹಾಕಿ ಹಿಸುಕಲು ಶುರುಮಾಡಿದರು. ಹಝ್ರತ್ ಪೈಗಂಬರ್(ಸ)ರ ಜೀವ ಹೋಗುವ ಸಾಧ್ಯತೆಯಿತ್ತು. ಆಕಸ್ಮಿಕವಾಗಿ ಅಲ್ಲಿಗೆ ಹಝ್ರತ್ ಅಬೂಬಕರ್(ರ) ಬಂದರು ಮತ್ತು ಹಝ್ರತ್ ಪೈಗಂಬರ್(ಸ)ರನ್ನು ಬಹಳ ಕಷ್ಟದಿಂದ ಬಿಡಿಸಿಕೊಂಡರು. ಆಗ ಅವರು ಹಝ್ರತ್ ಅಬೂಬಕರ್(ರ)ರನ್ನು ಎಷ್ಟು ಹೊಡೆದರು ಎಂದರೆ, ಅವರು ಪ್ರಜ್ಞೆತಪ್ಪಿ ನೆಲಕ್ಕೆ ಬಿದ್ದರು.

ಹಝ್ರತ್ ಅಬೂಬಕರ್(ರ) ಇಸ್ಲಾಂ ಸ್ವೀಕಾರ ಮಾಡಿದ ವೇಳೆ ಅವರ ಬಳಿ 40 ಸಾವಿರ ದಿರ್ಹಂ ಇದ್ದುವು. ಅವರು ಅದನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದರು ಮತ್ತು ಅಲ್ಲಾಹನನ್ನು ನಂಬಿದ ಕಾರಣದಿಂದ ತೊಂದರೆಗೆ ಗುರಿಪಡಿಸಲಾಗುತ್ತಿದ್ದ ಏಳು ಗುಲಾಮರನ್ನು ಅವರು ಸ್ವತಂತ್ರಗೊಳಿಸಿದರು. ಆ ಗುಲಾಮರಲ್ಲಿ ಹಝ್ರತ್ ಬಿಲಾಲ್(ರ), ಹಝ್ರತ್ ಆಮಿರ್ ಬಿನ್ ಫುಹೈರ(ರ), ಹಝ್ರತ್ ಝಿನ್ನೀರ(ರ), ಹಝ್ರತ್ ನಹ್‌ದಿಯ ಮತ್ತು ಅವರ ಮಗಳು, ಬನೀ ಮುಅ್‌ಮಿಲ್‌ನ ಒಬ್ಬಳು ದಾಸಿ ಹಾಗೂ ಉಮ್ಮೇ ಉಬೈಸ್ ಇದ್ದರು.

ಹಝ್ರತ್ ಝಿನ್ನೀರ ರೂಮಿ(ರ) ಇಸ್ಲಾಮ್ ಸ್ವೀಕಾರದಲ್ಲಿ ಮುಂದಾಗಿದ್ದ ಮಹಿಳೆಯರಲ್ಲಿ ಒಳಪಟ್ಟಿದ್ದರು. ಅವರು ಇಸ್ಲಾಂ ಸ್ವೀಕರಿಸಿದಾಗ ಅವರ ಕಣ್ಣಿನ ದೃಷ್ಟಿ ನಷ್ಟವಾಯಿತು. ಆಗ ಮುಶ್ರಿಕರು ಹೇಳಿದರು: ಲಾತ್ ಮತ್ತು ಉಝ್ಝರನ್ನು ನಿರಾಕರಿಸಿದ ಕಾರಣದಿಂದ ಝಿನ್ನೀರ ಕುರುಡಿಯಾದಳು. ಆಗ ಝಿನ್ನೀರ(ರ) ಸತ್ಯನಿಷೇಧಿಗಳೊಡನೆ ಹೇಳಿದರು: ಲಾತ್ ಮತ್ತು ಉಝ್ಝಾ ಹೇಗೆ ತಾನೆ ನನ್ನನ್ನು ಕುರುಡಿ ಮಾಡುವರು, ಅವರಿಗೆ ಸ್ವತಃ ಕಣ್ಣು ಕಾಣುತಿಲ್ಲ. ಇದು ದೇವವಿಧಿತವಾಗಿದೆ. ಅಲ್ಲಾಹನ ಇಚ್ಛೆ ಪ್ರಕಾರ ನನ್ನ ಕಣ್ಣಿನ ದೃಷ್ಟಿ ನಷ್ಟವಾಯಿತು ಮತ್ತು ನನ್ನ ದೃಷ್ಟಿಯನ್ನು ಮರಳಿಸಲು ಸಹ ನನ್ನ ಪ್ರಭುವಿಗೆ ಸಾಧ್ಯವಿದೆ. ಹಾಗೆ ಅವರು ರಾತ್ರಿ ನಿದ್ದೆ ಹೋಗಿ ಮರುದಿನ ಬೆಳಿಗ್ಗೆ ಎಚ್ಚೆತ್ತಾಗ ಅಲ್ಲಾಹನು ಅವರ ದೃಷ್ಟಿಯನ್ನು ಮರಳಿಸಿದ್ದನು. ಆಗ ಖುರೈಶಿಗಳು ಹೇಳಿದರು ಇದು ಮುಹಮ್ಮದನ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಜಾದುವಿನ ಕಾರಣದಿಂದ ಆಗಿದೆ. ಅವರಿಗೆ ನೀಡಲಾಗುತ್ತಿದ್ದ ಕಷ್ಟತೆಗಳನ್ನು ಹಝ್ರತ್ ಅಬೂಬಕರ್(ರ) ಕಂಡಾಗ ಅವರನ್ನು ಖರೀದಿ ಮಾಡಿ ಸ್ವತಂತ್ರಗೊಳಿಸಿದರು.

(ಹುಝೂರ್ ಹೇಳಿದರು:) ಈ ಪ್ರಸ್ತಾಪ ಮುಂದುವರೆಯುವುದು. ಇನ್ಶಾ ಅಲ್ಲಾಹ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*(atba)**

*At, Masjid Mubarak, Islamabad, Tilford, UK, On 10-12-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon